ಕರ್ನಾಟಕ ಸರ್ಕಾರ

# ಕಾಲೇಜು ಶಿಕ್ಷಣ ಇಲಾಖೆ

ದೂರವಾಣಿ: 080-22343904/05

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು-01. ದಿನಾಂಕ:04.08.2017.

ಸಂಖ್ಯೆ: ಕಾಶಿಇ/ಶೈವಿ/28/ಎನ್ಎಸ್ಎಸ್/2017-18

## ಸುತ್ತೋಲೆ

ವಿಷಯ: 2017-18ನೇ ಸಾಲಿನ N.S.S-ETI ತರಬೇತಿ ಕಾರ್ಯಕ್ರಮಕ್ಕೆ ಎನ್.ಎಸ್.ಎಸ್. ಅಧಿಕಾರಿಗಳನ್ನು ನಿಯೋಜಿಸುವ ಬಗ್ಗೆ.

ಉಲ್ಲೇಖ: ರಾಜ್ಯ ಎನ್.ಎಸ್.ಎಸ್. ಅಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ರಾಷ್ಟ್ರೀಯ ಸೇವಾ ಯೋಜನಾ ಕೋಶ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರ ಕಛೇರಿ ಪತ್ರ ಸಂಖ್ಯೆ:ಯುಸೇಇ/ ರಾಸೇಯೋ/14/2017-18/81, ದಿನಾಂಕ:30.05.2017.

* * * * * *

ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಡ್ಡಾಯವಾಗಿ ಎನ್.ಎಸ್.ಎಸ್. ಘಟಕಗಳನ್ನು ಸ್ಥಾಪಿಸಿ ನಡೆಸುವುದು ಹಾಗೂ ಈ ಘಟಕಗಳನ್ನು ನಡೆಸಲು ತರಬೇತಿ ಪಡೆದ ಅಧ್ಯಾಪಕರುಗಳನ್ನು ಎನ್.ಎಸ್.ಎಸ್. ಅಧಿಕಾರಿಯನ್ನಾಗಿ ನಿಯೋಜಿಸುವುದು ಕಡ್ಡಾಯವಾಗಿರುತ್ತದೆ. ಕೆಲವು ಕಾಲೇಜುಗಳಲ್ಲಿ ತರಬೇತಿ ಪಡೆಯದ ಅಧ್ಯಾಪಕರನ್ನೇ ಕಾಲೇಜಿನ ಎನ್.ಎಸ್.ಎಸ್. ಅಧಿಕಾರಿಯನ್ನಾಗಿ ನಿಯೋಜಿಸುತ್ತಿರುವುದು ಕಂಡುಬಂದಿರುವ ಹಿನ್ನೆಲೆಯಲ್ಲಿ ಎನ್.ಎಸ್.ಎಸ್. ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗಲು N.S.S-ETI ತರಬೇತಿಯನ್ನು ನಡೆಸಲಾಗುತ್ತಿದೆ.

**ಪ್ರತಿ ಕಾಲೇಜಿನಲ್ಲಿ ಎನ್.ಎಸ್.ಎಸ್. ಘಟಕವನ್ನು ನಡೆಸಲು ಎನ್.ಎಸ್.ಎಸ್. ತರಬೇತಿ ಪಡೆದ ಒಬ್ಬ ಪುರುಷ ಮತ್ತು ಮಹಿಳಾ ಅಧ್ಯಾಪಕರುಗಳು ಇರುವುದು ಕಡ್ಡಾಯವಾಗಿರುವ ಹಿನ್ನೆಲೆಯಲ್ಲಿ ಇಲಾಖಾ ವ್ಯಾಪ್ತಿಯ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಈಗಾಗಲೇ ತರಬೇತಿ ಪಡೆದ ಪುರುಷ/ಮಹಿಳಾ ಎನ್.ಎಸ್.ಎಸ್. ಅಧಿಕಾರಿಗಳು ಇದ್ದಲ್ಲಿ, ಸದರಿ ಕಾಲೇಜುಗಳಿಂದ ಮತ್ತೊರ್ವ ಪುರುಷ/ಮಹಿಳಾ ಅಧ್ಯಾಪಕರೊಬ್ಬರನ್ನು ಎಸ್.ಎಸ್.ಎಸ್. ತರಬೇತಿಗೆ ನಿಯೋಜಿಸಬೇಕಾಗಿರುತ್ತದೆ.**

ಈ ನಿಟ್ಟಿನಲ್ಲಿ, ಮೈಸೂರು ವಿಶ್ವವಿದ್ಯಾಲಯದ ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿಗಳ ತರಬೇತಿ ಸಂಸ್ಥೆಯು (N.S.S-ETI) **ದಿನಾಂಕ:09-08-2017 ರಿಂದ 15-08-2017 ರವರೆಗೆ** ಎನ್.ಸಿ.ಹೆಚ್.ಎಸ್. ಬಿಲ್ಡಿಂಗ್, **ಗಾಂಧಿ ಭವನದ ಹತ್ತಿರ, ಮಾನಸ ಗಂಗೋತ್ರಿ, ಮೈಸೂರು-570006** ಇಲ್ಲಿ ಆಯೋಜಿಸಲಾಗಿರುವ 8ನೇ ಬ್ಯಾಚ್‌ನ ತರಬೇತಿ ಕಾರ್ಯಕ್ರಮಕ್ಕೆ ಹಾಜರಾಗಲು ತರಬೇತಿ ಪಡೆಯದೇ ಇರುವ ಎನ್.ಎಸ್.ಎಸ್. ಅಧಿಕಾರಿ ಅಥವಾ ಸದರಿ ಎನ್.ಎಸ್.ಎಸ್. ಅಧಿಕಾರಿಯು ಈಗಾಗಲೇ ತರಬೇತಿ ಪಡೆದಿದ್ದಲ್ಲಿ ಮತ್ತೊರ್ವ ಪುರುಷ/ಮಹಿಳಾ ಅಧ್ಯಾಪಕರೊಬ್ಬರನ್ನು ಕಡ್ಡಾಯವಾಗಿ ನಿಯೋಜಿಸುವಂತೆ ಸೂಚಿಸಲಾಗಿದೆ. ಸದರಿ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಬಗ್ಗೆ ಹಾಜರಾತಿ ಪ್ರಮಾಣ ಪತ್ರವನ್ನು ಪ್ರಾಂಶುಪಾಲರಿಗೆ ಒಪ್ಪಿಸುವ ನಿಬಂಧನೆಗೊಳಪಟ್ಟು ಅನ್ಯಕಾರ್ಯನಿಮಿತ್ತ ರಜೆಯನ್ನು ಮಂಜೂರು ಮಾಡಲಾಗಿದೆ.

......2

**ಸೂಚನೆಗಳು:**

1) ಸದರಿ ತರಬೇತಿಗೆ ಹಾಜರಾಗಲು ಪ್ರಾಂಶುಪಾಲರು ಕಾಲೇಜಿನಿಂದ ಬಿಡುಗಡೆ ಮಾಡಿರುವ ಬಗ್ಗೆ ಆದೇಶದ ಪ್ರತಿಯನ್ನು ಕಡ್ಡಾಯವಾಗಿ ತರಬೇತಿಗೆ ತೆಗೆದುಕೊಂಡು ಹೋಗುವುದು.

2) ತರಬೇತಿ ಕಾರ್ಯಕ್ರಮವು ಈ ಮೇಲೆ ತಿಳಿಸಿರುವ ದಿನಾಂಕಗಳಂದು ಬೆಳಗ್ಗೆ 9:00 ಗಂಟೆಯಿಂದಲೇ ಪ್ರಾರಂಭವಾಗುವುದರಿಂದ ತರಬೇತಿ ಕಾರ್ಯಕ್ರಮ ಪ್ರಾರಂಭವಾಗುವ ಹಿಂದಿನ ದಿವಸವೇ ಸಾಯಂಕಾಲ 5:00 ಗಂಟೆಯೊಳಗಾಗಿ ಡಾ.ಬಿ. ಚಂದ್ರಶೇಖರ್, ಸಂಯೋಜನಾಧಿಕಾರಿ, ಎನ್.ಎಸ್.ಎಸ್-ಇ.ಟಿ.ಐ. ಇವರಲ್ಲಿ ವರದಿ ಮಾಡಿಕೊಳ್ಳುವುದು (ದೂರವಾಣಿ:0821-2419581, 9448912063), ತರಬೇತಿ ಕಾರ್ಯಕ್ರಮ ಪ್ರಾರಂಭವಾಗುವ ದಿನಾಂಕದಂದು ಬೆಳಗ್ಗೆ 9:00 ಗಂಟೆಯ ನಂತರ ಬಂದವರನ್ನು ತರಬೇತಿಗೆ ಸೇರಿಸಿಕೊಳ್ಳಲಾಗುವುದಿಲ್ಲ.

3) ತರಬೇತಿ ಅವಧಿಯಲ್ಲಿ ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿಗಳು ವಾಸ್ತವ್ಯ ಮಾಡಲು ಎನ್.ಎಸ್.ಎಸ್. ಭವನದಲ್ಲಿ ವ್ಯವಸ್ಥೆ ಮಾಡಲಾಗಿರುತ್ತದೆ.

4) ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿಗಳು ಪಾಸ್‌ಪೋರ್ಟ್ ಅಳತೆಯ ಎರಡು ಭಾವಚಿತ್ರಗಳನ್ನು ಕಡ್ಡಾಯವಾಗಿ ತೆಗೆದುಕೊಂಡು ಹೋಗುವುದು.

ಕಾಲೇಜು ಶಿಕ್ಷಣ ಆಯುಕ್ತರು

**ಇವರಿಗೆ,**

1. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಕಲಬುರಗಿ.
2. ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
3. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕಾ.ಶಿ.ಆ. ಕಛೇರಿ, ಬೆಂಗಳೂರು.
4. ಶ್ರೀ ಆರ್. ಶ್ರೀಕಾಂತ್, ನೋಡಲ್ ಅಧಿಕಾರಿ, ಕಾ.ಶಿ.ಆ. ಕಛೇರಿ, ಬೆಂಗಳೂರು.

**ಪ್ರತಿಯನ್ನು:**

1. ಡಾ. ಗಣನಾಥಶೆಟ್ಟಿ, ರಾಜ್ಯ ಎನ್.ಎಸ್. ಅಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ರಾ.ಸೇ.ಯೋ. ಕೋಶ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಶ್ರೀ ಅರುಣ್ ಪೂಜಾರ್, ಎನ್.ಎಸ್.ಎಸ್. ಪ್ರಾದೇಶಿಕ ನಿರ್ದೇಶಕರು, ಬೆಂಗಳೂರು.
3. ಕುಲಸಚಿವರು/ಎನ್.ಎಸ್.ಎಸ್. ಸಮನ್ವಯಾಧಿಕಾರಿ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
4. ಕಛೇರಿ ಪ್ರತಿ